**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**Spl.C.284/2023**

| | | |
|---|---|---|
| ಸಾಕ್ಷಿದಾರರ ಹೆಸರು | : | ಸಂಜೀವ ಕುಮಾರ |
| ತಂದೆಯ ಹೆಸರು | : | ಜಯಪ್ಪ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಪಿ.ಎಸ್.ಐ., ನಾಗರಿಕ ಹಕ್ಕು ಜಾರಿ ನಿರ್ದೇನಾಲಯ, ದಾವಣಗೆರೆ |
| ವಾಸ ಸ್ಥಳ | : | ದಾವಣಗೆರೆ |

ಪಿ.ಡಬ್ಲ್ಯೂ 1

ಸಿ.ಡಬ್ಲ್ಯೂ 1

ದಿ: 23-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ದಿಃ 14-07-2020 ರಿಂದ 31-01-2023 ರವರೆಗೆ ನಾನು ಹದಡಿ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿದ್ದೇನೆ. ಈ ಪ್ರಕರಣದಲ್ಲಿ ದಿಃ 19-12-2022 ರಂದು ಬೆಳಿಗ್ಗೆ 8.30 ರ ಸಮಯದಲ್ಲಿ ನಾನು ಠಾಣಾ ಪ್ರಭಾರದಲ್ಲಿದ್ದಾಗ ನಾಗನೂರು ಗ್ರಾಮದ ನಾಗನೂರು-ಶಾಮನೂರು ರಸ್ತೆಯ ಭಾರತ್ ಗ್ಯಾಸ್ ಗೋಡಾನ್ ಹತ್ತಿರ ಯಾರೋ ಒಬ್ಬ ಆಸ್ಸಾಮಿಯು ಸಾರ್ವಜನಿಕರಿಗೆ ಗಾಂಜಾವನ್ನು ಮಾರಾಟ ಮಾಡುತ್ತಿದ್ದಾನೆ ಅಂತ ಬಾತ್ಮಿದಾರರದಿಂದ ಬಂದ ಮಾಹಿತಿ ಮೇರೆಗೆ ಮಾಹಿತಿಯನ್ನು ಠಾಣಾ ದಿನಚರಿಯಲ್ಲಿ ನಮೂದು ಮಾಡಿ, ಮೇಲಾಧಿಕಾರಿಗಳಿಗೆ ದೂರವಾಣಿ ಮುಖಾಂತರ ಕರೆ ಮಾಡಿ ತಿಳಿಸಿರುತ್ತೇನೆ. ದಾಳಿ ಮಾಡಿ ಪ್ರಕರಣವನ್ನು ದಾಖಲಿಸಲು ಅವರಿಂದ ಅನುಮತಿ ಪಡೆದಿರುತ್ತೇನೆ. ಠಾಣಾ ದಿನಚರಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-1 ಅಂತ ಗುರುತಿಸಲಾಯಿತು.

ನಿಪಿ-1 ಒಟ್ಟು 4 ಪುಟಗಳು ಇರುತ್ತವೆ. ನಂತರ ಅದೇ ದಿನ ದಾವಣಗೆರೆಯ ಜಿಲ್ಲಾ ಎಸ್.ಪಿ. ರವರು ಸ್ಥಳಕ್ಕೆ ಹೋಗಿ ದಾಳಿ ನಡೆಸಿ ಅಂತ ಪ್ರಕರಣ ಕಂಡು ಬಂದಲ್ಲಿ ದಾಖಲು ಮಾಡುವಂತೆ ಅನುಮತಿ ಪತ್ರ ನೀಡಿರುತ್ತಾರೆ. ಸದರಿ ಜ್ಞಾಪನವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-2 ಅಂತ, ಸ್ವೀಕೃತಿ ಸಹಿಯನ್ನು ನಿಪಿ-2(ಎ) ಅಂತ ಗುರುತಿಸಲಾಯಿತು. ಸದರಿ ದಾಳಿಗೆ ಪಂಚರನ್ನು ನೇಮಿಸಿ ಕಳುಹಿಸಲು ಶಿರಮಗೊಂಡನಹಳ್ಳಿ ಪಿ.ಡಿ.ಓ. ರವರಿಗೆ ಪತ್ರ ಬರೆದಿರುತ್ತೇನೆ. ಆ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-3 ಅಂತ, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಅಂತ ಗುರುತಿಸಲಾಯಿತು. ಆ ಪ್ರಕಾರ ಪಿ.ಡಿ.ಓ. ರವರು ಚಾಸಾ- 2 ಮತ್ತು 3 ರವರನ್ನು ಸರ್ಕಾರಿ ಪಂಚರನ್ನಾಗಿ ನೇಮಕ ಮಾಡಿ ಕಳುಹಿಸಿಕೊಟ್ಟಿರುತ್ತಾರೆ. ಸದರಿ ಪಿ.ಡಿ.ಓ. ರವರು ನೇಮಕ ಮಾಡಿದ ಆದೇಶ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-4 ಅಂತ, ಸ್ವೀಕೃತಿ ಸಹಿಯನ್ನು ನಿಪಿ-4(ಎ) ಅಂತ ಗುರುತಿಸಲಾಯಿತು. ಸದರಿ ದಾಳಿಗೆ ಪತ್ರಾಂಕಿತ ಅಧಿಕಾರಿಗಳಾಗಿ ಹಾಜರಾಗಿರಲು ಎ.ಎಸ್.ಪಿ. ದಾವಣಗೆರೆ ಗ್ರಾಮಾಂತರ ಕನ್ನಿಕಾ ಸಿಕ್ರಿವಾಲ್ ರವರಿಗೆ ಕೋರಿಕೊಂಡಿದ್ದು, ಸದರಿಯವರು ಸಹ ಠಾಣೆಗೆ ಹಾಜರಾಗಿರುತ್ತಾರೆ. ಪಂಚರು ಸಹ ಬೆಳಿಗ್ಗೆ 10.00 ಗಂಟೆಗೆ ಹಾಜರಾಗಿರುತ್ತಾರೆ. ನಂತರ ಇಬ್ಬರು ಪಂಚರಿಗೆ ಮತ್ತು ಪತ್ರಾಂಕಿತ ಅಧಿಕಾರಿಗಳಿಗೆ ದಾಳಿಯ ಬಗ್ಗೆ ಮಾಹಿತಿಯನ್ನು ನೀಡಿ ಇಬ್ಬರು ಪಂಚರಿಗೆ ಪಂಚರಾಗಲು ಕೋರಿ ನೋಟಿಸ್ಸು ಜಾರಿ ಮಾಡಿರುತ್ತೇನೆ. ಸದರಿಯವರು ಒಪ್ಪಿಕೊಂಡಿರುತ್ತಾರೆ. ಪಂಚರಿಗೆ ನೀಡಿದ ಎರಡು ನೋಟಿಸ್ಸುಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ನಿಪಿ-5 ಮತ್ತು 6 ಅಂತ, ಸಾಕ್ಷಿಯ ಸಹಿಗಳನ್ನು ನಿಪಿ-5(ಎ) ಮತ್ತು 6(ಎ) ಅಂತ ಗುರುತಿಸಲಾಯಿತು. ನಂತರ ದಾಳಿ ಮಾಡಲು ಎಲ್ಲಾ ಸಲಕರಣೆಗಳನ್ನು ತೆಗೆದುಕೊಂಡು ಚಾಸಾ-4 ರಿಂದ 7 ರವರಿಗೆ ದಾಳಿಯ ಬಗ್ಗೆ ಮಾತಿಯನ್ನು ನೀಡಿ ದಾಳಿಗೆ ಬರುವಂತೆ ತಿಳಿಸಿ, ಸಿಬ್ಬಂದಿ, ಪಂಚರು ಹಾಗೂ ಪತ್ರಾಂಕಿತ ಅಧಿಕಾರಿಗಳೊಂದಿಗೆ ಅವರ ಇಲಾಖಾ ಜೀಪಿನಲ್ಲಿ ಮತ್ತು ನಾವು ನಮ್ಮ ಇಲಾಖಾ ಜೀಪಿನಲ್ಲಿ ಠಾಣೆಯನ್ನು ಬೆಳಿಗ್ಗೆ 10.15 ಕ್ಕೆ ಬಿಟ್ಟು ಮಾಹಿತಿ ಇದ್ದ ಸ್ಥಳಕ್ಕೆ ಬೆಳಿಗ್ಗೆ 10.35 ಗಂಟೆಗೆ ಹೋಗಿ ಸ್ವಲ್ಪ ದೂರದಲ್ಲಿ ವಾಹನಗಳನ್ನು ಮರೆಯಲ್ಲಿ ನಿಲ್ಲಿಸಿ, ದಾಳಿ ಮಾಡುವ ಪೂರ್ವದಲ್ಲಿ ನಾವೆಲ್ಲರೂ ಮತ್ತು ಪಂಚರು ಪರಸ್ಪರ ಅಂಗ ಶೋಧನೆ ಮಾಡಿಕೊಂಡು ನಮ್ಮಲ್ಲಿ ಗಾಂಜಾದ ಯಾವುದೇ

ವಸ್ತುಗಳು ಇಲ್ಲ ಅಂತ ಖಚಿತಪಡಿಸಿಕೊಂಡು, ಮಾಹಿತಿ ಇದ್ದ ಸ್ಥಳಕ್ಕೆ ನಡೆದುಕೊಂಡು ಹೋಗುತ್ತಿರುವಾಗ ಯಾರೋ ಒಬ್ಬ ಆಸ್ಸಾಮಿ ಕೈಯಲ್ಲಿ ಹಳದಿ ಬಣ್ಣದ ಬಟ್ಟೆ ಬ್ಯಾಗ್ ನ್ನು ಹಿಡಿದುಕೊಂಡು ನಿಂತಿದ್ದನ್ನು ನೋಡಿ ಅವನ ಮೇಲೆ ದಾಳಿ ಮಾಡಲು ಪ್ರಯತ್ನಿಸಿದಾಗ ಅವನು ತಪ್ಪಸಿಕೊಂಡು ಹೋಗಲು ಪ್ರಯತ್ನಿಸಿದಾಗ ನಮ್ಮ ಸಿಬ್ಬಂದಿಗಳಾದ ಚಾಸಾ-4, 5 ರವರು ಸದರಿ ಆಸ್ಸಾಮಿಯನ್ನು ಹಿಡಿದು ನಂತರ ನನ್ನ ಮತ್ತು ಪತ್ರಾಂಕಿತ ಅಧಿಕಾರಿಗಳ ಮುಂದೆ ಹಾಜರುಪಡಿಸಿದ್ದು, ನಂತರ ನಾನು ಸದರಿ ಆಸ್ಸಮಿಯನ್ನು ಹೆಸರು ಮತ್ತು ವಿಳಾಸವನ್ನು ಕೇಳಲಾಗಿ, ಆತನು ತನ್ನ ಹೆಸರು ಮಹಮ್ಮದ್ ಮುಬಾರಕ್ ಬಿನ್ ಮಹಮ್ಮದ್ ಸಾಬ್, ವಯಸ್ಸು 32, ವಾಸಃ ಬಾಷಾ ನಗರ,, ದಾವಣಗೆರೆ ಅಂತ ತಿಳಿಸಿದರು. ನಂತರ ಸದರಿ ಆಸ್ಸಾಮಿಯ ಅಂಗ ಶೋಧನೆ ಮಾಡಲು ಪತ್ರಾಂಕಿತ ಅಧಿಕಾರಿ ಅಥವಾ ನ್ಯಾಯಾಧೀಶರ ಮುಂದೆ ಮಾಡಬೇಕು ಅಂತ ಕೇಳಿದಾಗ ಆತ ಪತ್ರಾಂಕಿತ ಅಧಿಕಾರಿಗಳ ಮುಂದೆ ಅಂಗ ಶೋಧನೆ ಮಾಡಲು ಒಪ್ಪಿಕೆ ಸೂಚಿಸಿದ್ದು, ಈ ಬಗ್ಗೆ ಆಸ್ಸಾಮಿಗೆ ನೋಟಿಸ್ಸು ಜಾರಿ ಮಾಡಿರುತ್ತೇನೆ. ಸದರಿ ನೋಟಿಸ್ಸನ್ನು ನಿಪಿ-7 ಅಂತ, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಅಂತ, ಆರೋಪಿಯ ಸಹಿಯನ್ನು ನಿಪಿ-7(ಬಿ) ಅಂತ ಗುರುತಿಸಲಾಯಿತು. ನಂತರ ಆರೋಪಿಯ ಕೈಯಲ್ಲಿದ್ದ ಹಳದಿ ಬಣ್ಣ ಬಟ್ಟೆಯ ಬ್ಯಾಗ್ ನ್ನು ಪರಿಶೀಲಿಸಲಾಗಿ ಅದರಲ್ಲಿ ಗಾಂಜಾ ಇದೆ ಅಂತ ಹೇಳಿದನು. ಅದರಂತೆ ನಾವು ಸದರಿ ಬ್ಯಾಗ್ ನ್ನು ಪರಿಶೀಲಿಸಲಾಗಿ ಅದರಲ್ಲಿ ಒಂದು ಪಾಲಿಥಿನ್ ಕವರ್ ಇದ್ದು, ಅದರೊಳಗೆ ಗಾಂಜಾ ಸೊಪ್ಪು ಇದ್ದು, ಅದು ಹೂವು, ಮೊಗ್ಗ ಮತತು ಬೀಜದಿಂದ ಕೂಡಿದ್ದು ಅದು ಗಾಟು ವಾಸನೆ ಬರುತ್ತಿತ್ತು. ಅದು ಮೇಲನೋಟಕ್ಕೆ ಗಾಂಜಾ ಅಂತ ಕಂಡು ಬಂದಿತು. ನಂತರ ಪಾಲಿಥಿನ್ ಕವರ್ ಸಮೇತ ಗಾಂಜಾವನ್ನು ನಾವು ತೆಗೆದುಕೊಂಡು ಹೋಗಿದ್ದ ತೂಕದ ಯಂತ್ರದ ಸಹಾಯದಿಂದ ತೂಕ ಮಾಡಿದಾಗ ಅದು 540 ಗ್ರಾಂ. ಇರುವುದು ಕಂಡು ಬಂತು. ಅದರ ಅಂದಾಜು ಬೆಲೆ Rs.5500/-ಅಂತ ಅಂದಾಜಿಸಲಾಯಿತು. ತೂಕ ಮಾಡಿದ ಗಾಂಜಾವನ್ನು ಒಂದು ಬಿಳಿ ಬಟ್ಟೆಯಲ್ಲಿ ಹಾಕಿ ಪ್ಯಾಕ್ ಮಾಡಿ ಅದನ್ನು GS ಅಂತ ಅರಗಿನಿಂದ ಸೀಲ್ ಮಾಡಿ ಪ್ಯಾಕ್ ಮಾಡಿ, ಅದಕ್ಕೆ ನಮ್ಮ ಮತ್ತು ಪಂಚರ ಸಹಿಗಳುಳ್ಳ ಚೀಟಿಯನ್ನು ಅಂಟಿಸಿದೆವು. ನಂತರ ಅದನ್ನು ನಮ್ಮ ವಶಕ್ಕೆ ಪಡೆದುಕೊಂಡೆವು. ನಂತರ ಸದರಿ ಆರೋಪಿತನಿಗೆ

ಗಾಂಜಾವನ್ನು ಎಲ್ಲಿಂದ ತೆಗೆದುಕೊಂಡು ಬಂದಿದ್ದೀಯಾ ಅಂತ ವಿಚಾರಿಸಿದಾಗ ಆತ ನಾನು ಬಾತಿ ಗ್ರಾಮದ ಗುಡ್ಡದಲ್ಲಿ ಗಾಂಜಾ ಬೆಳೆದಿರುವ ಬಗ್ಗೆ ಮಾಹಿತಿಯನ್ನು ತಿಳಿಸಿದನು ಮತ್ತು ನನ್ನನ್ನು ಕರೆದುಕೊಂಡು ಹೋದರೆ ಆ ಸ್ಥಳವನ್ನು ತೋರಿಸುತ್ತೇನೆ ಅಂತ ತಿಳಿಸಿದನು. ನಂತರ ಸ್ಥಳದಲ್ಲಿ ಬೆಳಿಗ್ಗೆ 10.45 ರಿಂದ 12.30 ರವರೆಗೆ ಅಮಾನತ್ತು ಪಂಚನಾಮೆಯನ್ನು ಜರುಗಿಸಿರುತ್ತೇನೆ. ಅಮಾನತ್ತು ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-8 ಅಂತ, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಅಂತ ಗುರುತಿಸಲಾಯಿತು. ಆ ಸಮಯದಲ್ಲಿ 4 ಪೋಟೋಗಳನ್ನು ತೆಗೆಸಿರುತ್ತೇನೆ. ಆ ಪೋಟೋಗಳನ್ನು ಈಗ ನೋಡಿ ಗುರುತಿಸುತ್ತೇನೆ. ಸದರಿ 4 ಪೋಟೋಗಳನ್ನು ನಿಪಿ-9 ರಿಂದ 12 ಅಂತ ಗುರುತಿಸಲಾಯಿತು. ನಿಪಿ-9 ರಿಂದ 12 ರ ಪೋಟೋಗಳಲ್ಲಿ ಆರೋಪಿ ಹಾಗೂ ಸದರಿ ಆರೋಪಿತನು ಕೈಯಲ್ಲಿ ಗಾಂಜಾ ಇರುವ ಹಳದಿ ಬಣ್ಣದ ಬ್ಯಾಗ್ ನ ಹಿಡಿದುಕೊಂಡಿರುಹಿದು ಹಾಗೂ ಗಾಂಜಾವನ್ನು ತೂಕ ಮಾಡುತ್ತಿರುವುದು, ಪಂಚರು, ಪತ್ರಾಂಕಿತ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಕಂಡು ಬರುತ್ತಾರೆ. ಸದರಿ ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಲಾಯಿತು. ಆ ಕಚ್ಚಾ ನಕಾಶೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-13 ಅಂತ, ಸಾಕ್ಷಿಯ ಸಹಿಯನ್ನು ನಿಪಿ-13(ಎ) ಅಂತ ಗುರುತಿಸಲಾಯಿತು.

2. ನಂತರ ಆರೋಪಿತನು ತಿಳಿಸಿದಂತೆ ನಮ್ಮ ಇಲಾಖಾ ಜೀಪಿನಲ್ಲಿ ಮಧ್ಯಾಹ್ನ 12.30 ಗಂಟೆಗೆ ಆತನು ಬಾತಿ ಗ್ರಾಮದ ಗುಡ್ಡದ ಕೆಳಗೆ ಜೀಪನ್ನು ಕರೆದುಕೊಂಡು ಹೋಗಿ ತಾನು ಗಾಂಜಾ ಬೆಳೆಯುತ್ತಿದ್ದ ಹಳೆಬಾತಿ ಗ್ರಾಮದ ಹತ್ತಿರ ಇರುವ ಗುಡ್ಡಕ್ಕೆ ಕರೆದುಕೊಂಡು ಹೋಗಿ, ತಾನು ಇದೇ ಜಾಗದಲ್ಲಿ ಗಾಂಜಾ ಬೆಳೆಯುತ್ತಿದ್ದ ಅಂತ ಹೇಳಿ ಜಾಗ ತೋರಿಸಿದ ಮತ್ತು ಇದೇ ಜಾಗದಲ್ಲಿ ತಾನು ಯಾರಿಗೂ ಗೊತ್ತಾಗದ ಹಾಗೆ ಗಾಂಜಾ ಬೀಜಗಳನ್ನು ತಂದು ಹಾಕಿ ಹೋಗುತ್ತಿದ್ದೆ ನಂತರ ಗಾಂಜಾ ಗಿಡ ಬೆಳೆದು ದೊಡ್ಡದಾದ ನಂತರ ಆ ಗಿಡವನ್ನು ಕಿತ್ತುಕೊಂಡು ಹೋಗಿ ಒಣಗಿಸಿ ಗಾಂಜಾ ಮಾರಾಟ ಮಾಡುತ್ತಿದ್ದೇನೆ ಅಂತ ನಮ್ಮ ಹಾಗೂ ಪತ್ರಾಂಕಿತ ಅಧಿಕಾರಿಗಳ ಮತ್ತು ಪಂಚರ ಸಮಕ್ಷಮ ಹೇಳಿ ಜಾಗ ತೋರಿಸಿರುತ್ತಾನೆ. ಸದರಿ ಜಾಗದಲ್ಲಿ ಗಾಂಜಾ ಗಿಡವನ್ನು ಬೆಳೆದು ಕಿತ್ತಿರುವಂತಹ ಕುರುಹುಗಳು ಕಂಡು ಬಂದಿರುತ್ತವೆ. ಅದು

ಸುತ್ತಲೂ ಗಿಡಮರಗಳಿಂದ ಕೂಡಿದ ಗುಡ್ಡವಾಗಿರುತ್ತದೆ. ಅಲ್ಲಿ ಎಲ್ಲರ ಸಮಕ್ಷಮ ಮಧ್ಯಾಹ್ನ 1.00 ರಿಂದ 1.45 ಗಂಟೆಯವರೆಗೆ ಪಂಚನಾಮೆ ಜರುಗಿಸಿರುತ್ತೇನೆ. ಆ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-14 ಅಂತ, ಸಾಕ್ಷಿಯ ಸಹಿಯನ್ನು ನಿಪಿ-14(ಎ) ಅಂತ, ಆರೋಪಿಯ ಸಹಿಯನ್ನು ನಿಪಿ-14(ಬಿ) ಗುರುತಿಸಲಾಯಿತು. ಆ ಸಮಯದಲ್ಲಿ ಪೋಟೋವನ್ನು ತೆಗೆಸಿದ್ದು, ಅದನ್ನು ಈಗ ನೋಡುತ್ತಿದ್ದು, ಪೋಟೋವನ್ನು ನಿಪಿ-15 ಅಂತ ಗುರುತಿಸಲಾಯಿತು. ನಂತರ ಅಲ್ಲಿಂದ ಆರೋಪಿ ಮತ್ತು ಮಾಲುಗಳೊಂದಿಗೆ ಮಧ್ಯಾಹ್ನ 2.30 ಗಂಟೆಗೆ ಠಾಣೆಗೆ ಬಂದು ಸರ್ಕಾರದ ಪರವಾರಿ ಸ್ವದೂರನ್ನು ಠಾಣಾಧಿಕಾರಿಗೆ ನೀಡಿ ಆರೋಪಿ, ಮಾಲು ಮತ್ತು ದಾಖಲೆಗಳನ್ನು ನೀಡಿರುತ್ತೇನೆ. ನಾನು ನೀಡಿದ ಸ್ವದೂರನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-16 ಅಂತ, ಸಾಕ್ಷಿಯ ಸಹಿಯನ್ನು ನಿಪಿ-16(ಎ) ಅಂತ ಗುರುತಿಸಲಾಯಿತು. ಆ ದಿನ ದಸ್ತಗಿರಿ ಮಾಡಿದ ಆರೋಪಿ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ಇದ್ದು, ಆತನನ್ನು ನೋಡಿ ಗುರುತಿಸುತ್ತಾರೆ. ನಂತರ ಮುಂದಿನ ಪ್ರಕ್ರಿಯೆಯನ್ನು ಎಸ್.ಹೆಚ್.ಓ. ರವರು ಮಾಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರವಾಗಿ**:

ಆರೋಪಿ ಪರ ಜೂನಿಯರ್ ವಕೀಲರು ಸಮಯ ಕೋರಿರುವುದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.